ಲಿಮಿಟ್ ಇದ್ದಷ್ಟನ್ನು ಕೊಟ್ಟಿದ್ದೇವೆ. ಈಗ 100 ಬೆಡ್‌ನ ಆಸ್ಪತ್ರೆಯಾದ್ದರಿಂದ ಔಷಧಿಯನ್ನು ನಾವು ಹೆಚ್ಚು ಮಾಡಿ 1,75,000 ಔಷಧಿಯನ್ನು ಈ ವರ್ಷದಲ್ಲಿ ಒದಗಿಸಿದ್ದೇವೆ. ಸನ್ಮಾನ್ಯ ಸಾದತ್ ಅಲಿ ಯವರು ಆ ಆಸ್ಪತ್ರೆಯನ್ನು ಸರ್ವಸಜ್ಜಿತ ಆಸ್ಪತ್ರೆಯನ್ನಾಗಿ ಮಾಡಬೇಕೆಂಬ ಕಳಕಳಿಯನ್ನು ಏನು ವ್ಯಕ್ತಪಡಿಸಿದ್ದಾರೆ, ಅದಕ್ಕೆ ಸರ್ಕಾರ ಕೂಡ ಸ್ಪಂದಿಸುತ್ತದೆ. ಆದಷ್ಟು ಬೇಗ ಆ ಕೆಲಸವನ್ನು ಮಾಡಿಕೊಡುತ್ತೇವೆನ್ನುವ ಭರವಸೆಯನ್ನು ಕೊಡುತ್ತೇನೆ.

**ವಿಷಯ:- ಸುಣ್ಣದ ಕಲ್ಲಿನ ಭೂಮಿಯ ಗುತ್ತಿಗೆ.**

**ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 473 (758)**

ಶ್ರಿ ಆರ್.ಬಿ.ತಿಮ್ಮಾಪುರ್ (ಮುಧೋಳ್) ಮಾನ್ಯ ಗಣಿ ಮತ್ತು ಭೂವಿಜ್ಞಾನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ ?

ಅ ಮೈಸುರು ಮಿನರಲ್ಸ್ ಲಿಮಿಟೆಡ್‌ನವರು ಎಷ್ಟ ಸಾವಿರ ಎಕರೆ ಸುಣ್ಣದ ಕಲ್ಲಿನ ಭೂಮಿಯನ್ನು ಲೀಸ್ ಮುಖಾಂತರ ತೆಗೆದುಕೊಂಡಿದ್ದಾರೆ.

ಆ ಎಷ್ಟು ಜಮೀನನ್ನು ಉಪಯೋಗಿಸಿದ್ದಾರೆ.

ಇ ಉಪಯೋಗಿಸದ ಭೂಮಿಯನ್ನು ನಿರುದ್ಯೋಗಿ ಪದವೀಧರರಿಗೆ ಬಿಟ್ಟು ಕೊಟ್ಟು ಅವರಿಗೆ ಉದ್ಯೋಗ ಅವಕಾಶ ಕಲ್ಪಿಸುವ ವಿಚಾರ ಸರ್ಕಾರಕ್ಕೆ ಇದೆಯೇ?

ಶ್ರಿ ಎಂ.ಎಲ್.ಉಸ್ತಾದ್ (ಗಣಿ ಮತ್ತು ಭೂವಿಜ್ಞಾನ ರಾಜ್ಯ ಸಚಿವರು)

ಅ ಮೆ:ಮೈಸೂರು ಮಿನರಲ್ಸ್ ಲಿಮಿಟೆಡ್ ಅವರಿಗೆ 7,228-30 ಹೆಕ್ಟೇರ್ ಭೂಮಿಯನ್ನು ಸುಣ್ಣದ ಕಲ್ಲಿಗಾಗಿ ಲೀಸ್ ಮೂಲಕ ಕೊಡಲಾಗಿದೆ.

ಆ ಇಲಾಖೆಯಲ್ಲಿನ ದಾಖಲೆ ಪ್ರಕಾರ ಮೆ:ಮೈಸೂರು ಮಿನರಲ್ಸ್ ಲಿಮಿಟೆಡ್‌ನವರು 134.76 ಹೆಕ್ಟೇರ್ ಪ್ರದೇಶದಲ್ಲಿ ಗಣಿ ಕೆಲಸ ಮಾಡಿದ್ದಾರೆ.

ಇ ಈ ವಿಚಾರವೇನೂ ಇಲ್ಲ. ಆದರೂ ಅರ್ಹ ಅಭ್ಯರ್ಥಿಯಿಂದ ಗಣಿ ಗುತ್ತಿಗೆಗಾಗಿ ಅರ್ಜಿ ಬಂದಲ್ಲಿ ಆದ್ಯತೆಯ ಮೇರೆಗೆ ಖನಿಜ ರಿಯಾಯಿತಿ ನಿಯಮಗಳು 1960ಕ್ಕೆ ಒಳಪಟ್ಟು ಅಂತಹ ಗಣಿ ಗುತ್ತಿಗೆಯ ಅರ್ಜಿಯನ್ನು ಪರಿಗಣಿಸಲಾಗುವುದು.

ಶ್ರಿ ಆರ್.ಬಿ.ತಿಮ್ಮಾಪುರ್:- ಸನ್ಮಾನ್ಯ ಅಧ್ಯಕ್ಷರೇ, ಎಮ್.ಎಮ್.ಎಲ್.ನಿಂದ7228.30 ಹೆಕ್ಟೇರ್ ಭೂಮಿಯನ್ನು ಸುಣ್ಣದ ಕಲ್ಲುಗಾಗಿ ಲೀಸ್ ಮಾಡಿದ್ದಾರೆ. ಇದನ್ನು ಎಷ್ಟೋ ವರ್ಷಗಳಿಂದ ಲೀಸ್ ಮಾಡಿಬಿಟ್ಟಿದ್ದಾರೆ. ಅದರಲ್ಲಿ ಬರೆ134.76 ಹೆಕ್ಟೇರ್ ಉಪಯೋಗ ಮಾಡುತ್ತಿದ್ದಾರೆ. ಎಷ್ಟು ವರ್ಷ ಇದನ್ನು ಉಪಯೋಗ ಮಾಡುತ್ತಾರೆನ್ನುವುದು ಗೊತ್ತಿಲ್ಲ. ಏತಕ್ಕೆಂದರೆ, ಬರೆ 7228.30 ಹೆಕ್ಟೇರ್ ಇರುವಾಗ 134 ಹೆಕ್ಟೇರ್ ಮಾತ್ರ ಉಪಯೋಗ ಮಾಡಿದ್ದಾರೆ. ಆದ್ದರಿಂದ ಅದನ್ನು ನಿರುದ್ಯೋಗಿ ಪದವೀಧರರಿಗೆ ಲೀಸ್ ಮೂಲಕ ಕೊಟ್ಟರೆ ಉಪಯೋಗವಾಗುತ್ತದೆನ್ನುವ ಮಾತನ್ನು ಕೇಳಿದರೆ ಆ ವಿಚಾರ ಏನು ಇಲವೆಂದು ಒಂದು ಕಡೆ ಹೇಳಿದರೆ, ಇನ್ನೊಂದು ಕಡೆ ಅಂಥ ಅರ್ಹ ಅಭ್ಯರ್ಥಿಯಿಂದ ಅರ್ಜಿ ಬಂದರೆ ಪರಿಗಣಿಸಲಾಗುವುದೆಂದು ಹೇಳುತ್ತಿದ್ದಾರೆ. ಪದವೀಧರರಿಗೆ ಕೊಡುತ್ತೀರಾ ಅಥವಾ ಇಲ್ಲವೆನ್ನುವುದು ಗೊತ್ತಾಗಿಲ್ಲ. ಎಂ.ಎಂ.ಎಲ್.ರವರು ಎಷ್ಟು ವರ್ಷ ಇದನ್ನು ಉಪಯೋಗ ಮಾಡುತ್ತಾರೆನ್ನುವುದು ನಿರ್ದಿಷ್ಟವಾಗಿಲ್ಲ. ಅದನ್ನು ಕೇಳುತ್ತೇನೆ.

ಶ್ರಿ ಎಂ.ಎಲ್.ಉಸ್ತಾದ್:- ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಹೇಳಿದಾಗ, 17,204 ಎಕರೆ ಭೂಮಿ ಎಂ.ಎಮ್.ಎಲ್.ಗೆ ಲೀಸ್ ಮೇಲೆ ತೆಗೆದುಕೊಂಡಿದ್ದಾಗಿದೆ. 19 ಟೋಟಲ್‌ಲೀಸಸ್ ಆಗಿರುವುದು. ಅದರಲ್ಲಿ 5 ಲೀಸ್ ಮಾತ್ರ ಮೈಸೂರು ಮಿನರಲ್ಸ್ ವತಿಯಿಂದ ಕೆಲಸ ಮಾಡಿಸುತ್ತಿದ್ದೇವೆ. ಇನ್ನು ಸದ್ಯಕ್ಕೆ ಈ ಮಿನರಲ್ ಬಗ್ಗೆ ಅಷ್ಟೇನು ಡಿಮ್ಯಾಂಡ್ ಇಲ್ಲ. ಮತ್ತೆ ವಿಶಾಖಪಟ್ಟಣದ ಸ್ಟೀಲ್ ಪ್ಲಾಂಟ್ ಸಲುವಾಗಿ ಅವರು

ಸಹ ಸಪ್ಲೈ ಮಾಡಬೇಕೆಂದು ಕೇಳಿದ್ದಾರೆ. ಆದರೆ ಇತ್ತೀನವರೆಗೆ ಸಪ್ಲೈ ಆರ್ಡರ್ಸ್ ಸಹ ಬಂದಿಲ್ಲ. ತಾವು ಅನ್ ಎಂಪ್ಲಾಯಿಡ್ ಗ್ರಾಜುಯೇಟ್ಸ್‌ನಿಂದ ಅರ್ಜಿ ಬಂದರೆ ಕನ್‌ಸಿಡರ್ ಮಾಡುತ್ತೀರ ಎಂದು ಕೇಳಿದ್ದೀರಿ. ಅಂಥ ಯಾವುದಾದರೂ ಅಪ್ಲಿಕೇಷನ್ ಬಂದರೆ ನಾವು ಕನ್‌ಸಿಡರ್ ಮಾಡಿ ಕೊಡಲಿಕ್ಕೆ ಪ್ರಯತ್ನ ಮಾಡುತ್ತೇವೆಂದು ಹೇಳಲಿಕ್ಕೆ ಇಚ್ಛಿಪಡುತ್ತೇನೆ.

**ವಿಷಯ:- ರಾಜ್ಯದಲ್ಲಿರುವ ಚರ್ಮ ಕೈಗಾರಿಕೆಗಳು.**

**ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 474 (2024)**

ಶ್ರೀ ಕೆ.ಹರ್ಷಕುಮಾರಗೌಡ (ಚಾಮರಾಜ):- ಮಾನ್ಯ ಸಣ್ಣ ಕೈಗಾರಿಕಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ ?

ಅ ರಾಜ್ಯದಲ್ಲಿ ಉತ್ಪಾದಿಸಲ್ಪಡುವ ಚರ್ಮವನ್ನು ಹದ ಮಾಡಲು ನಮ್ಮಲ್ಲಿರುವ ಉದ್ಯಮಗಳ ಸಂಖ್ಯೆ ಎಷ್ಟು?

ಆ ಪ್ರತಿ ವರ್ಷ ಎಷ್ಟು ಬೆಲೆಯ ಚರ್ಮವು ನಮ್ಮ ರಾಜ್ಯದಲ್ಲಿ ಹದಮಾಡಲ್ಪಡುತ್ತದೆ ?

ಇ ನಮ್ಮ ರಾಜ್ಯದಿಂದ ಹೊರ ರಾಜ್ಯಕ್ಕೆ ಪ್ರತಿವರ್ಷ ಎಷ್ಟು ಬೆಲೆಯ ಚರ್ಮವನ್ನು ರಫ್ತು ಮಾಡಲ್ಪಡುತ್ತದೆ ಮತ್ತು ಇದನ್ನು ಖರೀದಿಸುವ ಪ್ರಮುಖ ಹೊರ ರಾಜ್ಯಗಳಾವುವು ?

ಶ್ರೀ ನಸೀರ್ ಅಹಮದ್ (ಸಣ್ಣ ಕೈಗಾರಿಕಾ ರಾಜ್ಯ ಸಚಿವರು)

ಅ 15

ಆ ಅಂದಾಜು 22.60 ಕೋಟಿ ರೂಪಾಯಿಗಳು.

ಇ ಅಂದಾಜು 41.00 ಕೋಟಿ ರೂಪಾಯಿಗಳು ತಮಿಳುನಾಡು ಹೆಚ್ಚು ಖರೀದಿಸುತ್ತದೆ.

ಶ್ರೀ ಕೆ.ಹರ್ಷಕುಮಾರಗೌಡ:- ಮಾನ್ಯ ಅಧ್ಯಕ್ಷರೇ, ಉತ್ತರದಲ್ಲಿ ಕೈಗಾರಿಕಾ ಮಂತ್ರಿಗಳು ಕರ್ನಾಟಕದಲ್ಲಿ ಚರ್ಮ ಹದಮಾಡುವ ಕೈಗಾರಿಕೆಗಳು ಎಷ್ಟಿವೆ ಎಂದು ಕೇಳಿರುವುದಕ್ಕೆ 15 ಎಂದು ಹೇಳಿದ್ದಾರೆ. ಕರ್ನಾಟಕ ರಾಜ್ಯದಲ್ಲಿ ಈ ಒಂದು ಚರ್ಮ ಹದಮಾಡುವುದರಿಂದ ಎಷ್ಟು ಹಣ ಬರುತ್ತಿದೆ ಎಂಬುದಕ್ಕೆ 20ಕೋಟಿ ರೂಪಾಯಿಗಳು ಎಂದು ಅಂದಾಜು ಹೇಳಿದ್ದಾರೆ. ಹೊರರಾಜ್ಯಗಳಿಗೆ ಎಷ್ಟು ಕೋಟಿ ರೂಪಾಯಿಗಳ ಚರ್ಮ ಮಾರಾಟ ರಫ್ತು ಆಗುತ್ತಿದೆ ಎಂದು ಕೇಳಿರುವುದಕ್ಕೆ 40 ಕೋಟಿ ರೂಪಾಯಿಗಳೆಂದು ಹೇಳಿದ್ದಾರೆ. ತಮ್ಮ ಮೂಲಕ ನಾನು ಕೈಗಾರಿಕಾ ಮಂತ್ರಿಗಳನ್ನು ಕೇಳುತ್ತೇನೆ. ಹೊರರಾಜ್ಯಗಳಿಗೆ ಏನೊಂದು ಚರ್ಮ ರಫ್ತಾಗುತ್ತಿದೆ, ಆದರಿಂದ ಸಿದ್ಧಪಡಿಸಿದ ಸರಕನ್ನು ನಮ್ಮ ರಾಜ್ಯಕ್ಕೆ ತಾವು ಆಮದು ಮಾಡಿಕೊಳ್ಳುವ ಮೂಲಕ ಸುಮಾರು 100 ಕೋಟಿ ರೂಪಾಯಿಗಳಷ್ಟು ಆದಾಯದಿಂದ ಕರ್ನಾಟಕ ರಾಜ್ಯವು ವಂಚಿತವಾಗುವುದಿಲ್ಲವೇ ? ಕರ್ನಾಟಕ ರಾಜ್ಯದಲ್ಲಿ ಚರ್ಮ ಹದಮಾಡುವ ಸರ್ಕಾರಿ ಸ್ವಾಮ್ಯದ ಒಂದು ಉದ್ಯಮ ಇತ್ತು. ಅದನ್ನು ಮುಚ್ಚಿದ ಉದ್ದೇಶವೇನು ? ಅದನ್ನು ಪುನ: ಪ್ರಾರಂಭ ಮಾಡುವ ಉದ್ದೇಶ ಸರ್ಕಾರಕ್ಕೆ ಇದೆಯೆ?

ಶ್ರೀ ನಜೀರ್ ಅಹಮದ್:- ಈಗಾಗಲೇ ನಾನು ಸ್ಪಷ್ಟವಾಗಿ ಉತ್ತರ ಕೊಟ್ಟಿದ್ದೇನೆ. ನಮ್ಮ ರಾಜ್ಯದಲ್ಲಿ ಸುಮಾರು 48ಲಕ್ಷ ಟನ್ ಚರ್ಮ ಒಂದು ವರ್ಷಕ್ಕೆ ಬರುತ್ತಿದೆ. ಅದರಲ್ಲಿ ಶೇಕಡ 70 ರಷ್ಟು ತಮಿಳ್ನಾಡಿಗೆ ಹೊಗುತ್ತಿದೆ. ಕಾರಣ, ಅಲ್ಲಿ ಟ್ಯಾನಿಂಗ್ ಫಿಸಿಲಿಟೀಸ್ ಜಾಸ್ತಿ ಇದೆ. ಲೇಟೆಸ್ಟ್ ಟೆಕ್ನಾಲಜಿ ಯೂಸ್ ಮಾಡಿ ಟ್ಯಾನಿಂಗ್ ಫೆಸಿಲಿಟೀಸ್ ಜಾಸ್ತಿ ಇರುವುದರಿಂದ ಅಲ್ಲಿಗೆ ಹೋಗುತ್ತಿದೆ. ನಮ್ಮ ರಾಜ್ಯದಿಂದ ಹೆಚ್ಚಿನ ಪ್ರಮಾಣದಲ್ಲಿ ಚರ್ಮ ಎಕ್ಸ್‌ಪೋರ್ಟ್ ಆಗುತ್ತಿದೆ ಎಂದು ಹರ್ಷಕುಮಾರಗೌಡರ ಗಮನಕ್ಕೆ ತರಬಯಸುತ್ತೇನೆ. ಇವತ್ತಿನ ದಿವಸ ರಾಜ್ಯದಲ್ಲಿ ಹಲವಾರು ಜನರು ಗಾರ್ಮೆಂಟ್ಸ್ ಇಂಡಸ್ಟ್ರೀಸ್ ಓಪನ್ ಮಾಡಲಿಕ್ಕೆ ಮುಂದೆ ಬಂದಿದ್ದಾರೆ. ಬೆಂಗಳೂರಿನಲ್ಲಿ ಮಾತ್ರವಲ್ಲ, ಗ್ರಾಮಾಂತರ ಪ್ರದೇಶಗಳಲ್ಲಿ ಸಾಗರ ಅಂಥ ಜಾಗದಲ್ಲಿ ಈ ಆಕ್ಟಿವಿಟೀಸ್ ಹೆಚ್ಚಾಗಿ ನಡೆಯುತ್ತಿದೆ.